# ಏನೇ ಆದರೂ ಮಾನವ

- ರಿಚರ್ಡ್ ಪೋಲ್ಟ್

*Stone ಎಂಬುದು ಕಾಲೋಚಿತವಾದ ಮತ್ತು ಕಾಲಾತೀತವಾದ ವಿಚಾರಗಳ ಬಗ್ಗೆ ಚಿಂತಿಸುವ ಸಮಕಾಲೀನ ತತ್ತ್ವಶಾಸ್ತ್ರಿಗಳಿಗಾಗಿ ಹಾಗೂ ಇತರ ಚಿಂತಕರಿಗಾಗಿ ಇರುವ ಒಂದು ವೇದಿಕೆ.*

---------

ನಾನು ಎಲ್ಲೇ ಹೋಗಲಿ, ಜನಪ್ರಿಯಮಾಧ್ಯಮಗಳು, ವಿಜ್ಞಾನಿಗಳು ಮತ್ತು ಸಹತತ್ತ್ವಶಾಸ್ತ್ರಿಗಳು ಸಹ ನಾನು ಒಂದು ಯಂತ್ರವೆಂದು, ಅಥವಾ ಒಂದು ಪ್ರಾಣಿಯೆಂದು ಹೇಳುತ್ತಾರೆ. ನನ್ನ ನೈತಿಕತೆಯು ಗೆದ್ದಲುಹುಳುಗಳ ನಡವಳಿಕೆಯಿಂದ ಸ್ಫೂರ್ತಿಗೊಳ್ಳುವಂಥದ್ದು; ನನ್ನ ಮೆದುಳಾದರೋ ಆತ್ಮಸಾಕ್ಷಿಯ ಕಿರುಹೊಳಹನ್ನು ಮತ್ತು ಸ್ವಚ್ಛಂದತೆಯ ಭ್ರಮೆಯನ್ನು ಹೊಂದಿರುವ ಒಂದು ತಡವರಿಕೆ ತುಂಬಿದ ಕಂಪ್ಯೂಟರ್. ನಾನಾದರೋ ಮಾನವೀಯವಲ್ಲದೆ ಬೇರೇನೋ ಆಗಿದ್ದೇನೆ ಎನ್ನುತ್ತಾರೆ.

ಮೇಲ್ಕಂಡ ಅಭಿಪ್ರಾಯಗಳನ್ನು ಖಂಡಿಸಲು ನನಗೆ ಇಲ್ಲಿರುವ ಸಮಯ ಹಾಗೂ ಅವಕಾಶಗಳಿಗಿಂತ ಹೆಚ್ಚು ಬೇಕಾಗಬಹುದಾದರೂ, ನಾನೊಬ್ಬ ಇತರ ಪ್ರಾಣಿಗಳಿಗಿಂತ ಭಿನ್ನವಾದ ಮತ್ತು ಮುಖ್ಯವಾಗಿ ಕಂಪ್ಯೂಟರ್ ಗಿಂತ ಉತ್ತಮನಾದ ಮಾನವಜೀವಿಯಾಗಿದ್ದೇನೆಂದು ಪಟ್ಟುಬಿಡದೆ ಯಾಕೆ ನಂಬಿದ್ದೇನೆಂದು ಮಾತ್ರ ಸೂಚಿಸಬಯಸುತ್ತೇನೆ.

ನಾವು ಆಲೋಚನೆಯನ್ನು ನೈತಿಕತೆಯಿಂದ ಆರಂಭಿಸೋಣ. ಅನೇಕ ಜೀವಿಗಳು ಇತರ ಜೀವಿಗಳಿಗೆ ಉಪಕಾರವಾಗುವಂಥ ವರ್ತನೆಯನ್ನು ಪ್ರೋತ್ಸಾಹಿಸುವ ಜೀವಕಣಗಳನ್ನು ಹೊಂದಿರುತ್ತವೆ. ಇರುವೆಗಳು ಇದಕ್ಕೊಂದು ಉತ್ತಮ ಉದಾಹರಣೆ. ಈ ಒಂದೊಂದು ಕೀಟವೂ ತನ್ನ ಸಮುದಾಯಕ್ಕಾಗಿ ತನ್ನನ್ನೇ ಅರ್ಪಿಸಿಕೊಳ್ಳಲು ಸದಾ ಸಿದ್ಧ. Stone ವೇದಿಕೆಗಾಗಿ ಇತ್ತೀಚೆಗಿನ ಪ್ರಬಂಧವೊಂದರಲ್ಲಿ ಎಡ್ವರ್ಡ್ ಓ ವಿಲ್ಸನ್ ಅವರು ವಿವರಿಸಿದಂತೆ, ಕೆಲವು ಜೀವವಿಜ್ಞಾನಿಗಳು 'ಕುಟುಂಬದಆಯ್ಕೆ' ತತ್ತ್ವದ ಅನುಸಾರ ತನ್ನನ್ನು ತಾನು ಅರ್ಪಿಸಿಕೊಳ್ಳುವ ಪ್ರವೃತ್ತಿಯನ್ನು ಗುರುತಿಸಿದರೆ, ವಿಲ್ಸನ್ ಮುಂತಾದವರು 'ಸಮುದಾಯದ ಆಯ್ಕೆ' ತತ್ತ್ವವನ್ನು ಬೆಂಬಲಿಸಿದ್ದಾರೆ. ಈ ಆಯ್ಕೆ ಪ್ರವೃತ್ತಿಯು ವ್ಯಕ್ತಿ ವ್ಯಕ್ತಿಗಳ ನಡುವೆಯೂ ಕೆಲಸ ಮಾಡುತ್ತದೆ: "ಗುಂಪುಗಳ ಒಳಗೆ ಸ್ವಾರ್ಥಪರ ವ್ಯಕ್ತಿಗಳು ಪರಹಿತವಾದಿ ವ್ಯಕ್ತಿಗಳನ್ನು ಹಿಂದಿಕ್ಕಿದರೆ, ಪರಹಿತವಾದಿ ವ್ಯಕ್ತಿಗಳ ಗುಂಪುಗಳು ಸ್ವಾರ್ಥಪರರ ಗುಂಪುಗಳನ್ನು ಹಿಂದಿಕ್ಕಿಬಿಡುತ್ತವೆ. ಅಥವಾ ಅತಿ ಸರಳ ಮಾತು ಎಂಬ ಅಪಾಯಕ್ಕೂ ಒಡ್ಡಿಕೊಂಡು ಹೇಳುವುದಾದರೆ, ವ್ಯಕ್ತಿಗತ ಆಯ್ಕೆಯು ಪಾಪವನ್ನು ಪೋಷಿಸಿದರೆ ಸಮುದಾಯದ ಆಯ್ಕೆಯು ಒಳ್ಳೆಯತನವನ್ನು ಪೋಷಿಸುತ್ತದೆ! ವಿಲ್ಸನ್ ಅವರು ತಮ್ಮ ಈ ಹೇಳಿಕೆಯಲ್ಲಿ ಜಾಗರೂಕರಾಗಿದ್ದಾರೆ. ಆದರೆ ಕೆಲವು ವಿಕಾಸಾತ್ಮಕ ನೀತಿವಾದಿಗಳು 'ಮಾನವ ಸದ್ಗುಣಗಳನ್ನು ತಿಳಿಯಲು ನಮಗೆ ಬೇಕಾಗಿರುವುದು ಪರಹಿತವರ್ತನೆ ಹೇಗೆ ಬೆಳೆದುಬಂತೆಂಬುದರ ಸರಿಯಾದ ವಿವರಣೆ ಮಾತ್ರ -ಅದು ಏನಾದರೂ ಆಗಿರಲಿ' ಎಂದು ವಾದಿಸಲೂ ಹಿಂಜರಿಯುವುದಿಲ್ಲ.

ಕೀಟವಿಜ್ಞಾನದ ಬಗ್ಗೆಯಾಗಲೀ, ವಿಕಾಸವಾದದ ಬಗ್ಗೆಯಾಗಲೀ ನನಗೆ ಆಕ್ಷೇಪಣೆ ಇಲ್ಲ. ಆದರೆ ಅವುಗಳು ನೈತಿಕತೆಯ ಬಗ್ಗೆ ನನಗೆ ಬಹಳಷ್ಟು ತಿಳಿಹೇಳಬಲ್ಲವೆಂದು ಒಪ್ಪಲಾರೆ. ಮಾನವ ಕ್ರಿಯೆಯು ಬೇರೆಬೇರೆ ತುತ್ತತುದಿಗಳಿಗೆ ವ್ಯಾಪಿಸಬಲ್ಲಂಥದ್ದೆಂಬುದನ್ನು ಮೊದಲಿಗೆ ಪರಿಗಣಿಸಿರಿ. ಜನಗಳು ಕೆಲವೊಮ್ಮೆ ಬೇರೆ ಜೀವಿ ವರ್ಗಗಳ ಬಗ್ಗೆ ಸಹ ಅತಿವಿಶಿಷ್ಟ ಪರಹಿತಕಾರಿ ವರ್ತನೆಗಳನ್ನು ತೋರಬಲ್ಲರು; ಅಥವಾ ತದ್ವಿರುದ್ಧವಾಗಿ ಕೆಲವೊಮ್ಮೆ ತಮ್ಮದೇ ಮಕ್ಕಳ ಬಗ್ಗೆಯೂ ಔದಾರ್ಯ

ತೋರುವಲ್ಲಿ ತೀರಾ ಸೋಲಲೂ ಬಲ್ಲರು. ಹೀಗೆ ನಾವು ಅನುವಂಶೀಯವಾಗಿ ಪಡೆದ ಪ್ರವೃತ್ತಿಗಳು ಆಮೇಲೆ ಬದಲಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ಬಿಟ್ಟಿರುತ್ತವೆ: ಇಲ್ಲಿ ನಾವು ಮಾಡಿಕೊಳ್ಳುವ ಆಯ್ಕೆಗಳು ನಾವು ಆಯ್ಕೆಪಟಲದ ಯಾವ ಅಂಚಿಗೆ ತಲುಪುವೆವೆಂಬುದನ್ನು ನಿರ್ಣಯಿಸುತ್ತವೆ. ಇಲ್ಲಿಯೇ ನಮ್ಮ ನೈತಿಕ ಚರ್ಚೆ ಬರುವುದು - ನಾವು ಹೇಗೆ ರಚಿಸಲ್ಪಟ್ಟಿದ್ದೇವೆಂಬುದನ್ನು ವಿವರಿಸುವುದಲ್ಲ, ಬದಲಿಗೆ ನಮ್ಮದೇ ಮುಂದಿನ ಚರ್ಯೆಗಳನ್ನು ಚಿಂತಿಸುವುದು. *'ಈ ಪರೀಕ್ಷೆಯಲ್ಲಿ ನಾನು ಮೋಸಮಾಡಲೆ?', 'ಈ ಅಪರಿಚಿತನನ್ನು ವಂಚಿಸಲೆ?'* - ಈ ಪ್ರಶ್ನೆಗಳಿಗೆ ನನ್ನ ಸ್ವಾರ್ಥದ ಅಥವಾ ಪರಹಿತದ ಭಾವನೆಗಳು ಹೇಗೆ ವಿಕಾಸಗೊಂಡುವು ಎಂದು ತಿಳಿಯುವುದರಿಂದ ಸೂಕ್ತ ಇತ್ಯರ್ಥ ಮಾಡಲು ಸಹಾಯವಾಗುವುದಿಲ್ಲ. ಎಲ್ಲವೂ ಅಲ್ಲದಿದ್ದರೂ, ಬಹಳಷ್ಟು ನೀತಿಸಂಹಿತೆಗಳು ನಮಗೆ ಪರಹಿತಭಾವನೆಯನ್ನು ಅಭ್ಯಾಸಮಾಡಿಕೊಳ್ಳಲು ಉಪದೇಶಿಸುತ್ತವೆ. ಆದರೆ, ಮಾನವ ಜನಾಂಗವು ಸ್ವಾರ್ಥ ಹಾಗೂ ಪರಹಿತದ ವರ್ತನೆಗಳೆರಡರಲ್ಲೂ ವಿಸ್ತಾರವಾದ ವ್ಯಾಪ್ತಿಯನ್ನು ತೋರಿಸುವ ಸಾಮರ್ಥ್ಯವನ್ನು ಬೆಳೆಸಿಕೊಂಡಿದೆಯಾದ್ದರಿಂದ, *ಜೀವಶಾಸ್ತ್ರದ ಯಾವುದೇ ದೃಷ್ಟಿಕೋನದಿಂದ* ಪರಹಿತಭಾವನೆಯು ಸ್ವಾರ್ಥಕ್ಕಿಂತ ಉತ್ತಮವೆಂದು ಹೇಳಲು ಯಾವುದೇ ಕಾರಣವಿಲ್ಲ.

ವಾಸ್ತವವಾಗಿ, "ಹೀಗೇ ಇರಬೇಕು" ಎಂಬ ಕಲ್ಪನೆಯೇ ಜೀವವಿಕಾಸಸಿದ್ಧಾಂತಕ್ಕೆ ಸರಿಹೊಂದುವುದಿಲ್ಲ. ಒಬ್ಬ ಜೀವವಿಜ್ಞಾನಿಯು ಯಾವುದೇ ಪ್ರಾಣಿವರ್ಗವು ಪರಹಿತಭಾವನೆಯ ನಿರ್ದಿಷ್ಟ ಮಟ್ಟವನ್ನು ಹೊಂದಿರಬೇಕೆಂದು ನಿರೀಕ್ಷಿಸುವುದಿರಲಿ, ಯಾವುದೇ ನಿರ್ದಿಷ್ಟ ಜೀವಿಯು ಹೆಚ್ಚು ಸಹಕಾರಿಯಾಗಿರಬೇಕು ಎಂದು ನಿರೀಕ್ಷಿಸುವುದೂ ಸಲ್ಲದ ಮಾತಾಗುತ್ತದೆ. ವಿಲ್ಸನ್ ಅವರು ಹೇಳುವಂತೆ, ಸ್ವಾರ್ಥದ ಪರಾಕಾಷ್ಠೆಯ ಹೆಸರಿನಲ್ಲಿ ಸಮಾಜವನ್ನು ವಿಸರ್ಜಿಸಿಬಿಡಬಾರದು, ಅಥವಾ ಇರುವೆಗಳ ರೀತಿ ಕೇಳಿದ್ದನ್ನು ತ್ಯಾಗಮಾಡುವ ಯಂತ್ರಜೀವಿಗಳೂ ಆಗಬಾರದು ಎಂದು ತೀರ್ಮಾನಿಸಿದರೆ ನಾವು ಒಂದು ನೈತಿಕ ನಿರ್ಣಯ ಮಾಡಿದಂತಾಗುತ್ತದೆಯೇ ಹೊರತು ಜೀವಶಾಸ್ತ್ರೀಯ ತೀರ್ಮಾನವನ್ನಲ್ಲ. ಅಂತೆಯೇ ಜೀವಶಾಸ್ತ್ರೀಯ ದೃಷ್ಟಿಯಿಂದ 'ನಾನು ಸಾಮಾನ್ಯವಾಗಿ ಇರುವುದಕ್ಕಿಂತ ಹೆಚ್ಚು ಉದಾರಿಯಾಗಿ ಇರಬೇಕು' ಎಂಬ ಅಥವಾ, 'ದುಷ್ಟನೊಬ್ಬನನ್ನು ನಿವಾರಿಸಿಬಿಡಬೇಕು ಮತ್ತು ಶಿಕ್ಷಿಸಿಬಿಡಬೇಕು' ಎಂಬ ಇಂಥಾ ನಿರೀಕ್ಷೆಗೆ ಅರ್ಥವಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಶುದ್ಧ ಜೀವಶಾಸ್ತ್ರಾಧಾರಿತ ನೈತಿಕತಾವಾದವು ನೈತಿಕ ಚರ್ಚೆಯನ್ನೇ ಅರ್ಥಹೀನಗೊಳಿಸುತ್ತದೆ.

ಕೆಲವರು "ಹೀಗೇ ಇರಬೇಕು" ಎಂಬ ಪದವನ್ನೇ ಕೈಬಿಡಬೇಕು ಎಂಬ ಸ್ವಯಂವಿರೋಧದ ನಿರ್ಣಯವನ್ನೂ ಕೈಗೊಂಡಾರು! ನಾನು ಹೀಗೆ ನಿರ್ಣಯಿಸಲು ಬಯಸುತ್ತೇನೆ - ಇರುವೆಗಳು ಏನೂ ಆಗಿರಬಹುದು, ಮಾನವೀಯ ಎಂಬುದೊಂದನ್ನು ಬಿಟ್ಟು. ಕ್ರಿಯೆಯ ಉದ್ದೇಶ್ಯದ ಅಸ್ಪಷ್ಟ ಹೊಳಹುಗಳಾದ ನೋವು, ನಲಿವು ಅವುಗಳಿಗೂ ಅನುಭವಕ್ಕೆ ಬಂರಬಹುದಾದರೂ ಮಾನವೀಯ ಸಜ್ಜನಿಕೆಗೆ (ದೈವಿಕತೆಗೆ ಅಲ್ಲವೇ ಅಲ್ಲ) ಅವು ಹತ್ತಿರವೂ ಬರಲಾರವು. ನಾವು ಮಾತಾಡುತ್ತಿರುವುದು ಇರುವೆಗಳ ಬಗ್ಗೆ, ತೋಳಗಳ ಬಗ್ಗೆ ಅಥವಾ ರಕ್ಷಣೆಯಿಲ್ಲದ ತುಪ್ಪುಳ ಹೆಗ್ಗಣಗಳ ಬಗ್ಗೆಯೇ ಇರಲಿ, ಪ್ರಾಣಿಗಳ ಸಹಕಾರಪ್ರವೃತ್ತಿಯು ಮಾನವೀಯ ಸದ್ಗುಣವಂತೂ ಅಲ್ಲ. ಜೀವಶಾಸ್ತ್ರವು ನಿರ್ಲಕ್ಷಿಸುವ, ಅಥವಾ ವಿವರಿಸಲು ಪ್ರಯತ್ನಿಸುವ ಸಭ್ಯತೆ, ಸ್ವಾಭಿಮಾನ, ಪ್ರಾಮಾಣಿಕತೆ, ಗೌರವ, ವಿಧೇಯತೆ, ನ್ಯಾಯ, ಇತ್ಯಾದಿ ಸಂಗತಿಗಳನ್ನು ಮಾನವೀಯ ಸದಸದ್ವಿವೇಕವು ಪರಿಗಣಿಸಬೇಕು. ಈ ವಿಷಯಗಳು ಸಾಕಷ್ಟು ಚರ್ಚಾಸ್ಪದವಾಗಿವೆ, ಅನಿಶ್ಚಿತವಾಗಿವೆ, ಶಾಶ್ವತವಾಗಿ ಹಾಗೆಯೇ ಇರಬಹುದು ಕೂಡಾ. ಹಾಗೆಂದು ಅವು ಅರ್ಥವಿಲ್ಲದವುಗಳೆಂದು ಹೇಳುವುದು ದೂರದ ಹೇಳಿಕೆಯಾದೀತು.

ಇನ್ನು  ನನ್ನ ಮೆದುಳು ಮತ್ತು ಇರುವೆಗಳ ಮೆದುಳು ಎರಡೂ ಬರೀ ವೆಟ್ ಕಂಪ್ಯೂಟರ್ ಗಳು ಎಂದು ಅವರು ನನಗೆ ಹೇಳುತ್ತಾರೆ. ಸ್ಟೀವನ್ ಪಿಂಕರ್ ಅವರು How the Mind Works (ಮೆದುಳು ಹೇಗೆ ಕೆಲಸ ಮಾಡುತ್ತದೆ) ಎಂಬಲ್ಲಿ ಹೇಳುವಂತೆ "ಜೀವವಿಕಾಸವು ನಮ್ಮನ್ನು .. ಒಂದು ನರಮಂಡಲದ ಕಂಪ್ಯೂಟರ್ ನೊಂದಿಗೆ .. ಸಜ್ಜುಗೊಳಿಸಿದೆ", "ಮಾನವೀಯ ಯೋಚನೆ ಹಾಗೂ ವರ್ತನೆ, ಅದು ಎಷ್ಟೇ ಸೂಕ್ಷ್ಮ ಮತ್ತು ನಮ್ಯವಾಗಿರಲಿ, ಅದೊಂದು ತುಂಬಾ ಜಟಿಲವಾದ ತಂತ್ರಾಂಶದ ಉತ್ಪನ್ನವಾಗಿರಬಹುದು". ಆದರೆ ಈ ಕಂಪ್ಯೂಟರ್ ದೃಷ್ಟಾಂತವು ನನಗಿಂತ ಮೊದಲೇ ಅನೇಕ ತತ್ತ್ವಶಾಸ್ತ್ರಿಗಳಿಂದ ಖಂಡಿಸಲ್ಪಟ್ಟಿದೆಯಾದರೂ, ಅದಕ್ಕೆ ನಮ್ಮ ಸಂಸ್ಕೃತಿಯಲ್ಲಿ ಬದುಕುಳಿಯುವ ಸಾಮರ್ಥ್ಯವಿದೆ, ಮತ್ತದು ಎರಡೂ ದಿಕ್ಕುಗಳಲ್ಲಿ ಕೆಲಸಮಾಡಬಲ್ಲುದು. ನಾವು ಮನುಷ್ಯರಂತೆ "ಅರ್ಥಮಾಡಿಕೊಳ್ಳುವ", "ನೆನಪಿಡುವ" ಮತ್ತು "ನಿರ್ಣಯ ತೆಗೆದುಕೊಳ್ಳುವ" ಕಂಪ್ಯೂಟರ್ ಗಳ ಬಗ್ಗೆ ಮಾತನಾಡುತ್ತೇವೆ ಮತ್ತು ಕಂಪ್ಯೂಟರ್ ಗಳಂತೆ "ಮಾಹಿತಿಯನ್ನು ತೆಗೆದುಕೊಳ್ಳುವ" ಹಾಗೂ "ಮಾಹಿತಿಯನ್ನು ಪ್ರಕ್ರಿಯೆಗೊಳಿಸುವ" ಮಾನವರ ಬಗ್ಗೆಯೂ ಮಾತನಾಡುತ್ತೇವೆ.

ಆದ್ದರಿಂದ ನಾನು ಈ ಪ್ರಬಂಧವನ್ನು ಯಾವ ಯಂತ್ರಗಳಿಂದ ಬರೆಯುತ್ತಿದ್ದೇನೋ ಮತ್ತು ನೀವು ಓದುತ್ತಿರಬಹುದೋ, ಆ ಯಂತ್ರಗಳಿಂದ ನಾನಾಗಲೀ ನೀವಾಗಲೀ ಭಿನ್ನವಲ್ಲವೇ ಅಲ್ಲ? ಗೂಗಲ್ ನ ಸರ್ವರ್ ಗಳು ಬಿಲಿಯಗಟ್ಟಲೆ ಜಾಲತಾಣಗಳನ್ನು ಕ್ಷಣಮಾತ್ರದಲ್ಲಿ ಬಾಚಿಬಿಡಬಹುದು, ಆದರೆ ಅವು ಆಯಾ ಜಾಲತಾಣಗಳು ಹೇಳುವ ವಿಚಾರಗಳ ಬಗ್ಗೆ ತಟಸ್ಥವಾಗಿರುತ್ತವೆ ಮತ್ತು ಆ ವಿಚಾರಗಳ ಒಂದಕ್ಷರವೂ ಅವಕ್ಕೆ ತಿಳಿಯದು. 'ಸಿರಿ' (ಅನ್ವೇಷಣ ಸಹಾಯಕಿ) ನಿಮಗಾಗಿ ಹತ್ತಿರದ ಪಾನಗೃಹವನ್ನು ಹುಡುಕಿಕೊಡಬಹುದು, ಆದರೆ ಅವಳು ಮದ್ಯಪಾನವನ್ನು ಪ್ರೋತ್ಸಾಹಿಸುವುದೂ ಇಲ್ಲ, ತಿರಸ್ಕರಿಸುವುದೂ ಇಲ್ಲ. "ಪಾನಗೃಹ" ಎಂಬ ಪದವು ಕಂಪ್ಯೂಟರಿಗೆ ವಾಸ್ತವವಾಗಿ ಯಾವ ಅರ್ಥವನ್ನೂ ಕೊಡುವುದಿಲ್ಲ. ಅದಕ್ಕೆ ಗ್ರಹಿಕೆಯಾಗುವುದು ಒಬ್ಬ ಮಾನವನು ಅರ್ಥೈಸಬಹುದಾದ ಒಂದಷ್ಟು ವಿದ್ಯುನ್ಮಾನ ಸಂಕೇತಗಳ ಜೋಡಣೆ ಮಾತ್ರ. ಇಂದಿನ "ಕೃತಕ ಬುದ್ಧಿಶಕ್ತಿಯು" ಚಾತುರ್ಯದಿಂದ ವಿನ್ಯಾಸಗೊಳಿಸಲ್ಪಟ್ಟಿದೆ, ಆದರೆ ಅದು ನಿಜವಾದ ಬುದ್ಧಿಶಕ್ತಿಗೆ, 18 ನೇ ಶತಮಾನದ 'ಅಕ್ಷರ ಲೇಖೀ ಸ್ವಯಂಚಾಲಿತಯಂತ್ರ'ಗಳಿಗಿಂತ, ಹತ್ತಿರ ಬರಲಾರದು. ಈ ಯಂತ್ರಗಳು ಆಲೋಚಿಸಲಾರವು, ಏಕೆಂದರೆ ಅವು ಯಾವುವೂ *ಕಾಳಜಿ* ಪಡಲಾರವು; ಯಾವುದೇ ತಂತ್ರಾಂಶವು, ಅದು ಎಷ್ಟೇ ಜಟಿಲವಾದದ್ದಿದ್ದರೂ, ನಾವು ತಿಳಿದ ಮಟ್ಟಿಗೆ, ಈ ಪ್ರಪಂಚವನ್ನು ವಸ್ತುವಾಗಿ ಯಂತ್ರವೊಂದಕ್ಕೆ ಗ್ರಹಿಕೆ ಮಾಡಿಸಬಲ್ಲ ತಂತ್ರಾಂಶವಿಲ್ಲ. ಹಾಗಾಗಿ, ಕಂಪ್ಯೂಟರ ಗಳು ಏನು ಬೇಕಾದರೂ ಆದಾವು, ಮಾನವೀಯವಾಗಲಾರವು - ವಾಸ್ತವವಾಗಿ ಅವು ಇರುವೆಯ ಬೌದ್ಧಿಕ ಮಟ್ಟಕ್ಕಿಂತ ತುಂಬಾ ಕೆಳಗೆ ಇವೆ. ನೋವಿನ ಒಂದು ಸಣ್ಣ ಸೆಲೆಯನ್ನು ಅಥವಾ ನಲಿವಿನ ಬುಗ್ಗೆಯನ್ನು ಅನುಭವಿಸಬಲ್ಲ ಒಂದು ಕಂಪ್ಯೂಟರನ್ನು ನನಗೆ ತೋರಿಸಿರಿ, ಆಗ ಮಾತ್ರ ನಮ್ಮ ಯಂತ್ರಗಳು ಆಲೋಚಿಸುವ ಬಹು ದೀರ್ಘಪ್ರಯಾಣದ ಆರಂಭವನ್ನು ಮಾಡಿರುವುವೆಂದು ನಾನು ನಂಬುತ್ತೇನೆ.

ಮಾನವನನ್ನು ಅಧೋಮಾನವನಾಗಿ ಇಳಿಸುವ ಚಪಲತೆ ಹಿಂದಿನಿಂದಲೂ ಎಲ್ಲ ಕಡೆ ಇದ್ದೇ ಇದೆ. "ಕೆಲವು ತತ್ತ್ವಶಾಸ್ತ್ರಿಗಳು ಪ್ಲೇಟೋ ಅವರ ಜೈಲು ವಾಸವನ್ನು ಅವರ ಎಲುಬು, ಮಾಂಸಗಳ ಪರಿಸ್ಥಿತಿಯನ್ನು ವಿವರಿಸುತ್ತಾ ವರ್ಣಿಸುತ್ತಾರೆ; ಸಾವಿನ ಹೊಸ್ತಿಲಿಗೆ ಅವರು ಹೋಗಿ ನಿಂತ ನಿಜವಾದ ಕಾರಣಗಳಾದ - ಅತ್ಯುತ್ತಮವಾದ ವಿಷಯಗಳ ಬಗ್ಗೆ ಅವರ ನಿರ್ಣಯಗಳು ಹಾಗೂ ದೃಷ್ಟಿಕೋನಗಳು - ಈ ಕುರಿತಾಗಿ ಏನೂ ಹೇಳುವುದೇ ಇಲ್ಲ" ಎಂದು ಪ್ಲೇಟೊನ "Phaedo" (ಪ್ಲೇಟೋನ ಅಂತಿಮ ದಿನಗಳ ಕಥನ) ಗ್ರಂಥದಲ್ಲಿ ಸೋಕ್ರಟೀಸ್ ಅವರು ಹೇಳುತ್ತಾರೆ. ಅಲ್ಲದೇ "ಕಾರಣ ಮತ್ತು ಯಾವುದಿಲ್ಲದೆ ಅದು ಕಾರಣವೇ ಆಗಲಾರದೋ ಅವೆರಡರ ವ್ಯತ್ಯಾಸವನ್ನೂ ಅವರು ಹೇಳಲಾರರು" ಎಂದೂ ಸೋಕ್ರಟೀಸ್ ಅವರು ಹೇಳುತ್ತಾರೆ. ಮೆದುಳು ಅಥವಾ ಜೀವತಳಿಯೊಂದಿಲ್ಲದಿದ್ದರೆ, ನಾನೊಂದು ಪ್ರಬಂಧವನ್ನು ಬರೆಯಲಾರೆ, ನನ್ನ ಮಗಳನ್ನು

ಶಾಲೆಗೆ ವಾಹನದಲ್ಲಿ ಕರೆದೊಯ್ಯಲಾರೆ, ಅಥವಾ ನನ್ನ ಹೆಂಡತಿಯೊಂದಿಗೆ ಚಲಚ್ಚಿತ್ರ ನೋಡಲು ಹೋಗಲಾರೆ. ನಾನು ಆ ಕ್ರಿಯೆಗಳನ್ನು ಏಕೆ ಆಯ್ಕೆ ಮಾಡುವೆನೆಂದು ನನ್ನ ತಳಿಯಾಗಲೀ, ಮೆದುಳಿನ ರಚನೆಯಾಗಲೀ ವಿವರಿಸುತ್ತದೆಯೆಂದು ಅದರ ಅರ್ಥವಲ್ಲ; ಅದಕ್ಕೇ ನಾನು - ಅವು ಅರ್ಥಪೂರ್ಣವಾದವು ಮತ್ತು ಅಮೂಲ್ಯವಾದವು ಎಂದು ಸಮರ್ಥಿಸುವುದು.

ತನ್ನ "Politics" ಕೃತಿಯಲ್ಲಿ ಅರಿಸ್ಟೋಟಲ್ 'ಸರಳೀಕರಣತತ್ತ್ವ'ವನ್ನು ಕೂಡಾ ವಿರೋಧಿಸಿದ್ದಾರೆ. "ಜೇನುನೊಣಗಳು ಮಾನವದೃಷ್ಟಿಯ ರಾಜನೀತಿ ಹೊಂದಿಲ್ಲ, ಏಕೆಂದರೆ ಯಾವುದು ಒಳಿತು, ಯಾವುದು ನ್ಯಾಯಯುತವಾದದ್ದು ಎಂದು ಅವು ಚರ್ಚಿಸಲಾರವು" ಎಂದು ಅವರು ಬರೆದಿದ್ದಾರೆ. ಜನ "ತಮ್ಮ ದೇಶಕ್ಕೆ ಹೆಚ್ಚು ಲಾಭಕರ ಯಾವುದು, ಯಾವ ವ್ಯವಸ್ಥೆ ಅತಿ ಉತ್ತಮ" ಎಂದೆಲ್ಲ ಸತತವಾಗಿ ವಾದಿಸುತ್ತಾರೆ, ಆದರೆ ಜೇನುನೊಣಗಳು 'ಗೂಡನ್ನು ಆಕ್ರಮಿಸಿ' ಚಳುವಳಿಯನ್ನು ಆರಂಭಿಸುವುದಿಲ್ಲ, ಅಥವಾ ಪರಾಗದ ಮೇಲೆ ಸಾರಾಸಗಟು ತೆರಿಗೆಗೆ ಕರೆ ನೀಡುವುದಿಲ್ಲ. ಕೆಲವು ಇತರ ಪ್ರಾಣಿಗಳು ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಗಳನ್ನೇನೋ ಹೊಂದಿವೆಯಾದರೂ ಅವು ಪರ್ಯಾಯ ವ್ಯವಸ್ಥೆಗಳ ಬಗ್ಗೆ - ನಿಷ್ಪಕ್ಷಪಾತದ ಕನಿಷ್ಠ ಅಭಿಲಾಷೆಯೊಂದಿಗೆ ಆಲೋಚಿಸಿ ಮತ್ತು ಅದಕ್ಕೆ ಕಾರಣಗಳನ್ನು ನೀಡಿಕೊಂಡು - ದೂರಾಲೋಚನೆ ಮಾಡಲಾರವು.

ಮತ್ತೇಕೆ ನಾವು ಶತಶತಮಾನಗಳಿಂದ ಮಾನವತೆಯನ್ನು ವಿವರಿಸಿಬಿಡಲು ಪ್ರಚೋದಿತರಾಗಿರುವುದು? ಎಡ್ಮಂಡ್ ಹಸ್ಸೆರ್ಲ್ ಯಾವುದನ್ನು "ಜೀವಜಗತ್ತು" ಎಂದರೋ ಅದನ್ನು ಮರೆಯುವ ಪ್ರವೃತ್ತಿಯೇ ಈ ಪ್ರವೃತ್ತಿಯ ಹಿಂದಿರುವ ದೋಷಿ ಎಂದು ನನಗನ್ನಿಸುತ್ತದೆ. ಜೀವಜಗತ್ತು ಎಂದರೆ ವಿಜ್ಞಾನವು ತನ್ನ ಬೇರುಗಳನ್ನು ಹೊಂದಿರುವ ಸಾಮಾನ್ಯ ಮಾನವ ಅನುಭವಗಳ ವಿಜ್ಞಾನಪೂರ್ವ ಜಗತ್ತು. ಈ ಜೀವಜಗತ್ತಿನಲ್ಲಿ ನಾವು ಬೆಲೆಬಾಳುವ ಅವಕಾಶಗಳಿಂದಲೂ, ಒಳ್ಳೆಯ ಹಾಗೂ ಕೆಟ್ಟ ಆಯ್ಕೆಗಳಿಂದಲೂ, ಅರ್ಥಪೂರ್ಣವಾದ ಗುರಿಗಳಿಂದಲೂ ಮತ್ತು ನಾವು ಕಾಳಜಿ ಪಡುವ ಸಾಧ್ಯತೆಗಳಿಂದಲೂ ಸುತ್ತುವರಿಯಲ್ಪಟ್ಟಿದ್ದೇವೆ. ಇಲ್ಲಿ ಸದ್ಗುಣ, ಕೆಡುಕು ಮುಂತಾದ ಪರಿಕಲ್ಪನೆಗಳು ಅರ್ಥಪಡೆದುಕೊಳ್ಳುತ್ತವೆ. ನಮಗಿರುವ ಅವಕಾಶಗಳಲ್ಲಿ ಇರುವೆಗಳ ಬಗ್ಗೆ ವೈಜ್ಞಾನಿಕವಾದ ಅಧ್ಯಯನವೋ, ಕಂಪ್ಯೂಟರ ಗಳ ಸಂರಚನೆಯೋ ಇದ್ದೇ ಇವೆ. ಒಮ್ಮೆ ನಾವು ಅಂಥ ಸಾಧ್ಯತೆಗಳನ್ನು ಅಪ್ಪಿಕೊಂಡೆವೋ, ಆಗ ಅದರೊಳಗೆ ಎಷ್ಟು ಸುಲಭವಾಗಿ ಮುಳುಗುತ್ತೇವೆಂದರೆ ಎಲ್ಲವನ್ನೂ ಅದರ ಭಾಷೆಯಲ್ಲೇ ಅರ್ಥೈಸಲು ಪ್ರಯತ್ನಿಸುತ್ತೇವೆ - ಆ ಉಪಕ್ರಮವು ಮೌಲ್ಯಕ್ಕೆ ಹಾಗೂ ಅರ್ಥಕ್ಕೆ ಜಾಗವನ್ನೇ ಬಿಡದಿದ್ದರೂ. ಆಗ ಯಾವ ಚಟುಚಟಿಕೆಯನ್ನು ಅನುಸರಿಸುತ್ತಿದ್ದೇವೆಯೋ ಅದರ ವಾಸ್ತವ ಜೀವಂತ ಬೇರುಗಳನ್ನೇ ನಾವು ಮರೆತುಬಿಟ್ಟಿದ್ದೇವೆ. ಒಂದು ಘಟಕವನ್ನು ಬಳಸಿ ಸಮಗ್ರವನ್ನು ವಿವರಿಸಲು ಪ್ರಯತ್ನಿಸುತ್ತೇವೆ.

ಉದಾಹರಣೆಗೆ, ಈ 'ಕಂಪ್ಯೂಟರ್ - ಮೆದುಳು' ಎರಡೂ ಒಂದೆ ಎಂಬ ದೃಷ್ಟಾಂತವನ್ನು ಅಂಗೀಕಾರಾರ್ಹವೆಂದು ತೋರುವಂತೆ ಮಾಡುವುದು "ಮಾಹಿತಿ" ಕುರಿತಾದ ಸರ್ವವ್ಯಾಪಕ ಮಾತುಗಳು. ಈ ಪದವು - ವಿಶೇಷವಾಗಿ 20 ನೇ ಶತಮಾನದ ಮಧ್ಯಕಾಲದ ಸಂವಹನಗಳಲ್ಲಿ - ಜೀವ ಜಗತ್ತಿನಲ್ಲಿ ಅದರ ಬೇರುಗಳನ್ನು ಉಪೇಕ್ಷಿಸಿ ಪ್ರಚಾರಮಾಡಲ್ಪಟ್ಟಿದೆ. "A Mathematical Theory of Communication" (ಸಂವಹನದ ಗಣಿತೀಯ ಸಿದ್ಧಾಂತ) ಎಂಬ ಕ್ಲಾಡ್ ಶಾನನ್ ಅವರ 1948 ರ ಪ್ರಬಂಧ ಈ ಮಾಹಿತಿ ಸಿದ್ಧಾಂತದ ಮೊಟ್ಟಮೊದಲ ಕೃತಿ. ಇದು ಮುಖ್ಯವಾಗಿ ಚುಕ್ಕೆಗಳ ಮತ್ತು ಗೆರೆಗಳ ಒಂದು ನಿರ್ದಿಷ್ಟ ಕ್ರಮವು ಪ್ರಸಾರಮಾಡಲ್ಪಡಲು ಮತ್ತು ಪುನಃ ನಿರೂಪಿಸಲ್ಪಡಲು ಬೇಕಾದ ಒಂದು ನೈಪುಣ್ಯದ ಬಗ್ಗೆ ಇದೆ. ಸತ್ಯದ ಬಗ್ಗೆಯಾಗಲೀ, ಸಂವೇದನೆಯ ಬಗ್ಗೆಯಾಗಲೀ, ಅರ್ಥಗ್ರಹಿಕೆಯ ಬಗ್ಗೆಯಾಗಲೀ ಇಲ್ಲಿ ಪ್ರಸ್ತಾವನೆಯಿಲ್ಲ. ಶಾನನ್ ಅವರು ಹೇಳುವಂತೆ " ಇಂಜಿನಿಯರಿಂಗ್ ಸಮಸ್ಯೆಗಳಿಗೆ, ಸಂವಹನದ ಅರ್ಥಾತ್ಮಕ ಅಂಶಗಳು ಕೂಡುವುದಿಲ್ಲ". ಆದರೆ ಈ ಸಂಕುಚಿತ ಅರ್ಥದ ಮಾಹಿತಿ ಸಿದ್ಧಾಂತದ ಪರಿಕಲ್ಪನೆಗಳು ನಮ್ಮ "ಮಾಹಿತಿ" ಯೆಂಬ ಈ ಪದವು ಆಯಾ ವಿಷಯದ

ಮಹತ್ತ್ವವನ್ನು ಮತ್ತು ಕಲಿಕೆಯನ್ನು ಒಳಗೊಳ್ಳುವುದೆಂಬ, ಮಾಹಿತಿಯ ವಿಶಾಲ ಅರ್ಥದ ಕಲ್ಪನೆಗಳನ್ನು ಪ್ರಭಾವಗೊಳಿಸಲು ಹೊರಟಿವೆ. ಇದು ತೀವ್ರವಾಗಿ ದಾರಿತಪ್ಪಿಸುವಂಥಾದ್ದು. ಆಲೋಚನೆ ಹಾಗೂ ಪ್ರತ್ಯಕ್ಷಾನುಭವವನ್ನು ಮಾಹಿತಿಪ್ರಕ್ರಿಯೆಗೊಳಿಸುವಿಕೆ ಎಂದೇ ನಾವೇಕೆ ಭಾವಿಸಬೇಕು? ನಮ್ಮ ಜೀವಜಗತ್ತಿಗೆ ನಮ್ಮ ಮಾಹಿತಿ ಸಾಧನಗಳು ಮುಖ್ಯ ಭಾಗಗಳು ನಿಜ, ಆದರೆ ನಾವು ಭಾಗದ ಭಾಷೆಯಿಂದ ಸಮಗ್ರವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ.

ಇಷ್ಟು ಹೊತ್ತಿಗೆ, ಪ್ರಕೃತಿವಾದೀ ತತ್ತ್ವಶಾಸ್ತ್ರಿಗಳು ನಾನು ಪ್ರಸ್ತಾಪಿಸಲು ಹೊರಟಿರುವುದರಲ್ಲಿ ಏನೋ ಒಂದು ಅಲೌಕಿಕವಾದ ಅಥವಾ ಭೂತಪ್ರೇತದ ಕಥೆಯಿದೆಯೆಂದು ಅನುಮಾನಿಸುತ್ತಾರೆ. ವಾಸ್ತವವಾಗಿ ಧರ್ಮವು ಸರಳೀಕರಣವಾದದ ಹೊಡೆತಗಳಿಂದ ಉಳಿದುಕೊಂಡಿದೆ - ಏಕೆಂದರೆ, ಇರುವೆಗಳು ಮತ್ತು ಕಂಪ್ಯೂಟರ್ ಗಳು ಹೊಂದಲಾರದ ಕಾಳಜಿಗಳನ್ನು, - ನಾನು ಯಾರು? ನನ್ನ ನಿಜ ಸ್ಥಾನ ಯಾವುದು? ನನ್ನ ಜೀವನದ ಉದ್ದೇಶ್ಯವೇನು? ಇತ್ಯಾದಿ - ಮಾನವೀಯ ಕಾಳಜಿಗಳನ್ನು, ಅದು ನಿಷ್ಕೃಷ್ಟವಾಗಿ ತಿಳಿಹೇಳುತ್ತದೆ. ಆದರೆ ಸರಳೀಕರಣವಾದವನ್ನು ತಿರಸ್ಕರಿಸಲು ನಾವು ಧರ್ಮವನ್ನೋ, ಅಲೌಕಿಕವಾದುದನ್ನೋ ಅಪ್ಪಿಕೊಳ್ಳಬೇಕಾದುದೇನೂ ಇಲ್ಲ. ತಥಾಕಥಿತ ಪ್ರಕೃತಿವಾದವು ಯಾವುದನ್ನು ಪ್ರಾಕೃತಿಕವೆಂದು ಆಯ್ಕೆಮಾಡಿಕೊಳ್ಳುತ್ತದೋ ಅದಕ್ಕಿಂತ, ಮಾನವ ಪ್ರಕೃತಿಯನ್ನೂ ಒಳಗೊಂಡಂತೆ, ಪ್ರಕೃತಿಯು ತುಂಬಾ ಹೆಚ್ಚು ಶ್ರೀಮಂತವಾಗಿದೆಯೆಂದು ನಾವು ಗುರುತಿಸಬೇಕು. ಪ್ರಕೃತಿಯು ಜೀವಜಗತ್ತಿನ ವಿಶಾಲ ದೃಶ್ಯಾವಳಿಯ ಜೋಡಣೆಗಳನ್ನು ಒಳಗೊಂಡಿದೆ.

ಜೀವಜಗತ್ತನ್ನು ನೆನಪಿಡಬೇಕೆಂಬ ಕರೆಯು "ನಿನ್ನನ್ನು ನೀ ತಿಳಿ" ಎಂಬ ಪ್ರಾಚೀನ ಗ್ರೀಕ್ ಉಪದೇಶದ ಒಂದು ಭಾಗವೇ ಆಗಿದೆ. 'ವರ್ತನೆಯು ಆಯಾ ತಳಿಯ ಕ್ರಿಯೆಯೆಂದು ವಾದಿಸುವ ವಿಜ್ಞಾನಿಯು ಮೊದಲಿಗೆ ತಾನು ಏಕೆ ವಿಜ್ಞಾನಿಯಾಗುವ ಆಯ್ಕೆ ಮಾಡಿಕೊಂಡೆ? ಎಂಬುದಕ್ಕೆ ತಳಿಶಾಸ್ತ್ರದ ಪ್ರಕಾರ ವಿವರಣೆ ಕೊಡಲಾರಳು. ಯಾವ ತತ್ತ್ವಶಾಸ್ತ್ರಿಯು 'ಸ್ವಾತಂತ್ರ್ಯ'ವನ್ನು ಅಲ್ಲಗಳೆಯುತ್ತಾನೋ ಅವನೇ ವಿಚಾರಸಂಕಿರಣಗಳಲ್ಲಿ ಈ ಅಭಿಪ್ರಾಯವನ್ನು ಸಮರ್ಥಿಸುವ ಆಯ್ಕೆಯನ್ನು ಸ್ವತಂತ್ರವಾಗಿ ಮಾಡಿಕೊಳ್ಳುತ್ತಾನೆ! ಜನ ತಮ್ಮ ಜೀವಜಗತ್ತನ್ನೇ ಪ್ರತಿದಿನವೂ ಮರೆತುಬಿಡುತ್ತಾರೆ! ಜೀವಜಗತ್ತು ಮಾನವೀಯವಾದದ್ದು ಮಾತ್ರ - ಸಂಪೂರ್ಣವಾಗಿ ಮಾನವೀಯವಾದದ್ದು.

-------

ರಿಚರ್ಡ್ ಪೋಲ್ಟ್ ಅವರು ಸಿನ್ಸಿನಾಟಿಯಲ್ಲಿ ಕ್ಸೇವಿಯರ್ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರ ಪ್ರಾಧ್ಯಾಪಕರು. "Heidegger: An Introduction" ಮುಂತಾದ ಕೃತಿಗಳನ್ನು ಅವರು ಬರೆದಿದ್ದಾರೆ.



–ಗೂಗಲ್ ಕೃಪೆ